

ಬೆನ್ನೇರಿದ ನಾಯಿ: 'ಟ್ರೇನ್ ಡ್ರೈವರ್ಸ್ ಡೈರಿ' ಚಿತ್ರದ ತಮಾಷೆಯ ದೃಶ್ಯ

ಹಿಡಿದು ತದುಕುತ್ತಾನೆ. ಸಿಮ ಕೊನೆಗೂ ಅಪ್ಪನ ಮಾತಿಗೆ ವಿರುದ್ಧವಾಗಿ ರೈಲು ಚಾಲಕ ಆಗುತ್ತಾನೆ. ಅವನಿಗೆ ಮನದನ್ನೆಯೂ ಒಲಿಯುತ್ತಾಳೆ.

ತನ್ನ ಮಗ ಬೇಗ ಯಾರಾದರೂ ಒಬ್ಬರ ಮೇಲೆ ರೈಲು ಹರಿಸಿ, ನಿಸೂರಾಗಿಬಿಡಲಿ ಎಂಬ ಕಾಳಜಿ ಇಲಿಜನದ್ದು. ಒಮ್ಮೆ ಹಾಗೆ ಆದರೆ, ಮಾನಸಿಕವಾಗಿ ರೈಲು ಚಾಲಕ ಗಟ್ಟಿಗೊಳ್ಳುತ್ತಾನೆ ಎನ್ನುವುದು ಅವನ ಅನುಭವ. ಇಲ್ಲವಾದರೆ ಯಾವಾಗ ಎಲ್ಲಿ ಯಾರು ರೈಲಿಗೆ ಸಿಲುಕುವರೋ ಎಂಬ ಆತಂಕ ಮನಸ್ಸಿನಿಂದ ಹೋಗುವುದೇ ಇಲ್ಲವೆನ್ನುವುದು ಆತನ ಅನುಭವ.

ಇಲಿಜ ಹಾಗೂ ಅವನ ಸ್ನೇಹಿತರು ಔತಣಕೂಟದಲ್ಲಿ ಚರ್ಚಿಸುವ ಸಂಗತಿಯೂ ಸಾವಿನದೇ. ಒಬ್ಬೊಬ್ಬರೂ ತಾವು ಕೊಂದ ಜನರ ಲೆಕ್ಕ ಹೇಳುತ್ತಾ ಪರಾಕ್ರಮಿಗಳ ಪೋಸು ಕೊಡುತ್ತಾರೆ. ಆಗ ತನ್ನ ಮಗನೂ ಬೇಗ ಯಾರನ್ನಾದರೂ ಕೊಂದು ಜಂಜಡಮುಕ್ತನಾಗಲಿ ಎಂಬ ಇಲಿಜನ ಮಹತ್ವಾಕಾಂಕ್ಷೆ ಮತ್ತೆ ಜಾಗೃತವಾಗುತ್ತದೆ.

ಚಾಲಕನಾಗಿ ಆರು ತಿಂಗಳಾದರೂ ಒಂದೂ ಸಾವಿಗೆ ಕಾರಣನಾಗದ ಸಿಮ ಚಡಪಡಿಸತೊಡಗುತ್ತಾನೆ. ಮಗನ ದುಗುಡ ಕಳೆಯಲೆಂದು ತಂದೆಯೇ ಹಳಿಯಮೇಲೆ ಮಲಗಲು ನಿಶ್ಚಯಿಸುತ್ತಾನೆ. ಆದರೆ, ಆಗುವುದೇ ಬೇರೆ. ತಂದೆ ಸಾಯುವುದಿಲ್ಲ, ಮಗನ ದುಗುಡವೂ ದೂರವಾಗುತ್ತದೆ. ಅದು ಹೇಗೆ ಎನ್ನುವ ಆಸಕ್ತಿಕರ ಸಸ್ಪೆನ್ಸ್ ಎಲ್ಲರ ಪಾಲಿಗೆ ಇರಲಿ.

'ಟ್ರೇನ್ ಡ್ರೈವರ್ಸ್ ಡೈರಿ' ಚಿತ್ರವನ್ನು ಬರೀ ಬ್ಲ್ಯಾಕ್ ಕಾಮಿಡಿ ಎಂದು ಕರೆದರೆ ಅದರ ಉದ್ದೇಶವನ್ನು ಸೀಮಿತಗೊಳಿಸಿದಂತಾದೀತು. ಸಂಭಾಷಣೆ ಹಾಗೂ ಸಂವಾದ ನೋಡುಗರಲ್ಲಿ ಆಗೀಗ ಹಾಸ್ಯರಸ ಒಸರುವಂತೆ ಮಾಡುತ್ತದೆನ್ನುವುದೇನೋ ನಿಜ. ಆದರೆ, ನಿರ್ದೇಶಕ ಮಿಲೋಸ್ ರ್‍ಯಾಡೋವಿಕ್ ಉದ್ದೇಶ ಹಾಸ್ಯಚಿತ್ರ ಮಾಡುವುದಲ್ಲ. ಬದಲಿಗೆ ರೈಲು ಚಾಲಕರ ಬದುಕಿನ ಅಚರ್ಚಿತ ಸಂಗತಿಯನ್ನು ಅನಾವರಣಗೊಳಿಸುವುದು. ಪಾತ್ರಗಳ ಪಾಲಿನ ವ್ಯಾಕುಲ ನೋಡುಗರ ಪಾಲಿಗೆ ಹಾಸ್ಯವಾಗಿಯಷ್ಟೆ ದಾಟಕೂಡದು. ಆ ಸೂಕ್ಷ್ಮ ಅರಿತೇ ನಿರ್ದೇಶಕರು ಚಿತ್ರಕಥೆ ಕಟ್ಟಿದ್ದಾರೆ.

ಪಾತ್ರಗಳ ಪೋಷಣೆಯಿಂದ ಹಿಡಿದು ದೃಶ್ಯಗಳ ಹೆಣಿಗೆಯವರೆಗೆ ಕಾಣುವುದು ಗಟ್ಟಿಶಿಲ್ಪ. ಒತ್ತಡದ, ಏಕಾಂಗಿ ಬದುಕಿನಲ್ಲೂ ಗಿಡಗಳ ಪೋಷಣೆ ಮಾಡುವ ಇಲಿಜ, ಅವರು ಸಾಕಿದ ವಿಚಿತ್ರ ತಳಿಯ ನಾಯಿ, ಆತ್ಮಸಂಗಾತಿಯ ಅಸಂಗತತೆ (ಸಾವಿಗೆ ಕಾರಣರಾದವರ ಪಾಪಪ್ರಜ್ಞೆ ಕಳೆಯುವ ಕಾಯಕ), ಊಟ ಮಾಡುವಾಗಿನ ಸಹಜತೆ, ನೆರೆಯವರ ಕಕ್ಕುಲತೆ, ಬಂಧು ಬಾಂಧವರ ಸಾವಿಗೂ ಕಾರಣವಾದ ಅದೇ ರೈಲಿನ ಚಾಲನೆ ಬದುಕಿನ ಅನಿವಾರ್ಯ ಕರ್ಮವಾಗಿರುವ ವ್ಯಂಗ್ಯ